V ಶಿವಮೊಗ್ಗ ಜಿಲ್ಲೆಯಲ್ಲಿರುವ ಸಂಚಾರಿ ಪಶು ಚಿಕಿತ್ಸಾಲಯಗಳನ್ನು ರಿಪೇರಿ ಮಾಡಿಸುವುದು

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸ್ವಾಮಿ, ಶಿವಮೊಗ್ಗ ಜಿಲ್ಲೆಯಲ್ಲಿ ೫ ತಾಲ್ಲೂಕು ಕೇಂದ್ರದಲ್ಲಿ'' ಸಂಚಾರಿ ಪಶು ಚಿಕಿತ್ಸಾಲಯ '' ಗಳಿದ್ದು ಅದರಲ್ಲಿ ಶಿಕಾರಿಪುರ, ಹೊನ್ನಾಳಿ, ಚನ್ನಗಿರಿ ತಾಲ್ಲೂಕಿನಲ್ಲಿರುವ ೩ ಸಂಚಾರಿ ಪಶುವೈದ್ಯವಾಹನಗಳು ಕಳೆದ ಐದಾರು ತಿಂಗಳುಗಳಿಂದ ಕೆಟ್ಟಿದ್ದು, ಈ ರೀತಿ ವಾಹನಗಳು ಕೆಟ್ಟಾಗ ಅಲ್ಲಿಯ ಜಿಲ್ಲಾ ಪಶು ವೈದ್ಯಾಧಿಕಾರಿಗಳು ರಿಪೇರಿ ಮಾಡಿಸಿ ಕೊಳ್ಳುವ ಅಧಿಕಾರವಿಲ್ಲದೆ, ಹಣವಿಲ್ಲದೆ ಪ್ರತಿ ಸಾರಿ ವಾಹನಗಳು ಕೆಟ್ಟಾಗ ಮಂಜೂರಾತಿಗಾಗಿ ಐದಾರು ತಿಂಗಳು ವಾಹನಗಳು ನಿಂತಿದ್ದು ಜಿಲ್ಲೆಯ ಜನತೆಗೆ ತೊಂದರೆಯಾಗಿದೆ.

ಉದಾಹರಣೆಗೆ ಶಿಕಾರಿಪುರ ಸಂಚಾರಿ ವಾಹನ ೧೯೮೫ರ ಜುಲೈ ತಿಂಗಳಿಂದ ಕೆಟ್ಟಿದ್ದು ಮತ್ತೆ ೬ ತಿಂಗಳುಗಳ ನಂತರ ೧೯೮೬ರ ಜನವರಿ ತಿಂಗಳಲ್ಲಿ ೩೨೫೫ ರೂಪಾಯಿಗಳ ಖರ್ಚು ಮಾಡಿ ರಿಪೇರಿ ಮಾಡಿಸಿದ್ದು ಈಗ ಮತ್ತೆ ಜುಲೈ ತಿಂಗಳಿಂದ ಅದು ಕೆಟ್ಟು ನಿಂತಿದ್ದು ಈವರೆಗೆ ರಿಪೇರಿ ಆಗದೆ ಮತ್ತೆ ಎಸ್ಟಿಮೇಟ್ ತಯಾರಿಸಿ ೨೪೯೦ ರೂಪಾಯಿಗಳ ರಿಪೇರಿ ಖರ್ಚಿಗೆ ಮಂಜೂರಾತಿಗೆ ಡೈರೆಕ್ಟರಿಗೆ ಕಳುಹಿಸಿದ್ದಾರೆ. ಈ ರೀತಿಯ ಅವ್ಯವಸ್ಥೆಯನ್ನು ತಪ್ಪಿಸಿ ತಕ್ಷಣ ಮೇಲ್ಕಂಡ ೩ ತಾಲ್ಲೂಕಿನ ವಾಹನಗಳನ್ನು ರಿಪೇರಿ ಮಾಡಿಸಿ ಮುಂದೆ ಈ ರೀತಿ ವಾಹನಗಳು ಕೆಟ್ಟಾಗ ಅಲ್ಲಿಯ ಜಿಲ್ಲಾ ಪಶು ವೈದ್ಯಾಧಿಕಾರಿಗಳೇ ಅದನ್ನು ೫ ಸಾವಿರದವರೆಗೂ ಬರುವ ರಿಪೇರಿ ಮಾಡಿಸುವ ಅಧಿಕಾರ ಕೊಟ್ಟು ಆಗಾಗ್ಗೆ ಆಗುತ್ತಿರುವ ಈ ತೊಂದರೆ ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ ? ಮತ್ತು ಈ ಮೇಲ್ಕಂಡ ೩ ತಾಲ್ಲೂಕಿನ ವಾಹನಗಳ ರಿಪೇರಿ ಯಾವಾಗ ಮಾಡಿಸಲಾಗುವುದು ? ಮತ್ತು ಈ ರೀತಿ ವಾಹನಗಳು ಕೆಟ್ಟಾಗ ಅಧಿಕಾರಿಗಳು ತುರ್ತು ಗಮನ ಕೊಟ್ಟು ರಿಪೇರಿ ಮಾಡಿಸದೆ, ಆ ವಾಹನದ ಡ್ರೈವರ್‌ಗಳಿಗೆ ಪ್ರತಿ ತಿಂಗಳು ಒಂದು ಸಾವಿರ ರೂಪಾಯಿಯಂತೆ ಸಂಬಳ ಕೊಡುವ ಈ ಅವ್ಯವಸ್ಥೆಯಿಂದ ಜನತೆ ಕೊಡುವ ತೆರಿಗೆ ಹಣ ಅಪವ್ಯಯವಾಗುವುದಿಲ್ಲವೆ ಎಂಬ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—ಶಿಕಾರಿಪುರ ಸಂಚಾರಿ ಪಶು ಚಿಕಿತ್ಸಾಲಯದ ವಾಹನದ ದುರಸ್ತಿ ಬಗ್ಗೆ ೨,೪೯೦ ರೂಪಾಯಿಗಳ ಎಸ್ಟಿಮೇಟನ್ನು ತಯಾರಿಸಿ ಬೆಂಗಳೂರು ವಿಭಾಗದ ಸಹ ನಿರ್ದೇಶಕರವರಿಂದ ಮಂಜೂರಾತಿಗಾಗಿ ಬಂದಿರುವುದನ್ನು ತಕ್ಷಣ ಮಂಜೂರಾತಿ ನೀಡಲು ಕ್ರಮ ಕೈಗೊಳ್ಳಲಾಗುವುದು. ಅಂತೆಯೇ ಹೊನ್ನಾಳಿ, ಶಿಕಾರಿಪುರ, ಚನ್ನಗಿರಿ ಮುಂತಾದ ಸಂಚಾರಿ ಪಶು ಚಿಕಿತ್ಸಾಲಯಗಳ ವಾಹನಗಳು ನಾದುರಸ್ತಿಗೊಂಡಿರುವ ಬಗ್ಗೆ ಪರಿಶೀಲಿಸಿ ಅವುಗಳನ್ನು ತಕ್ಷಣ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ನಂತರ, ಜಿಲ್ಲಾಮಟ್ಟದಲ್ಲಿಯೇ ಎಲ್ಲಾ ಆರ್ಥಿಕ ಅಧಿಕಾರದ ವಿಕೇಂದ್ರೀಕರಣ ಆಗುವುದರಿಂದ, ಎಲ್ಲಾ ಉಳಿದ ಇಲಾಖೆಗಳಂತೆಯೇ ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆಯು ಜಿಲ್ಲಾಮಟ್ಟದ ಅಧಿಕಾರಿಗೆ ಹೆಚ್ಚಿನ ಅಧಿಕಾರ ನೀಡುವ ಬಗ್ಗೆ ಪರಿಶೀಲಿಸಲಾಗುವುದು.

VI ಕಾಪು ಕ್ಷೇತ್ರದ ಹೆಜಮಾಡಿ ಗ್ರಾಮದ ಹತ್ತಿರ ಸಮುದ್ರದಲ್ಲಿ ದೋಣಿ ಕವಚಿ ಮೀನುಗಾರರು ನೀರು ಪಾಲಾಗಿರುವುದು

ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಕಾಪು ಕ್ಷೇತ್ರದ ಹೆಜಮಾಡಿ ಗ್ರಾಮದಲ್ಲಿ ಇತ್ತೀಚೆಗೆ ಬಡ ಮೀನುಗಾರರು ಮೀನು ಹಿಡಿಯುವ ಸಂದರ್ಭದಲ್ಲಿ ಸಮುದ್ರಕಿನಾರೆಯಲ್ಲಿ ದೋಣಿ ಕವಚಿ ಬಿದ್ದು ೩ ಜನ ಮೀನುಗಾರರು ನೀರುಪಾಲಾಗಿ ತೀರಿ ಹೋದರು. ಅವರು ತೀರ ಬಡ ಕುಟುಂಬಕ್ಕೆ ಸೇರಿದವರು. ಮೂರು ಕುಟುಂಬಗಳಲ್ಲಿ ಇನ್ನು ದುಡಿಯುವವರು ಯಾರೂ ಇಲ್ಲ. ಸರ್ಕಾರ ಈ ಬಗ್ಗೆ ಕೂಡಲೇ ಆ ಮೂರು ಕುಟುಂಬಗಳ ವಿಚಾರವನ್ನು ಮಾನವೀಯತೆಯಿಂದ ಪರಿಶೀಲಿಸಿ ಅವರಿಗೆ ಪರಿಹಾರ ಕೊಡಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣರೆಡ್ಡಿ.—ದಿನಾಂಕ ೨೫-೭-೮೬ರಂದು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕು ಹೆಜಮಾಡಿ ಗ್ರಾಮದಲ್ಲಿ ಮಾಟುಬಲೆ ಮೀನುಗಾರಿಕೆಗೆ ಹೋದ ೨ ಸಾಂಪ್ರದಾಯಿಕ ದೋಣಿಗಳು ಸಮುದ್ರದ ಅಬ್ಬರದ ಅಲೆಗಳಿಂದಾಗಿ ಮಗುಚಿ ಬಿದ್ದು ದುರಂತಕ್ಕೀಡಾಗಿರುವ

ಸಂಗತಿಯು ಸರ್ಕಾರದ ಗಮನಕ್ಕೆ ಬಂದಿರುವುದು. ಈ ದುರಂತದಲ್ಲಿ ಈ ಕೆಳಗಿನ ೩ ಮೀನುಗಾರರು ಸಮುದ್ರದಲ್ಲಿ ಮುಳುಗಿ ಮರಣ ಹೊಂದಿರುವರೆಂದು ತಿಳಿದು ಬಂದಿದೆ.

೧. ನಾರಾಯಣ ಪುತ್ರನ್ (ಸುಮಾರು ೫೦ ವರ್ಷ) ಐತ ಮರಕಾಲರ ಮಗ, ಹೆಜಮಾಡಿ ಕೋಡಿ, ಉಡುಪಿ ತಾಲ್ಲೂಕು, ದಕ್ಷಿಣ ಕನ್ನಡ.

೨. ವಿಶ್ವನಾಥ ಕೋಟ್ಯಾನ್ (ಸುಮಾರು ೪೨ ವರ್ಷ) ಮುತ್ತಯ್ಯ ಪುತ್ರನ್‌ರ ಮಗ, ಸಣ್ಣ ಗುಂಡಿ, ಹೆಜಮಾಡಿ, ಉಡುಪಿ ತಾಲ್ಲೂಕು, ದಕ್ಷಿಣ ಕನ್ನಡ.

೩. ಜನಾರ್ಧನ ಸಾಲ್ಯಾನ್ (ಸುಮಾರು ೪೧ ವರ್ಷ) ಶೇಷಪ್ಪ ಮರಕಾಲರ ಮಗ, ಕಣ್ಣಂಗಾರ್, ಹೆಜಮಾಡಿ, ಉಡುಪಿ ತಾಲ್ಲೂಕು, ದಕ್ಷಿಣ ಕನ್ನಡ.

ಇವರಲ್ಲದೆ ಈ ಕೆಳಗಿನ ಇಬ್ಬರು ಮೀನುಗಾರರು ದುರಂತದಲ್ಲಿ ಗಾಯಗೊಂಡು ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರು.

೧. ವಿಠಲ ಕೋಟ್ಯಾನ್ (ಸುಮಾರು ೨೮ ವರ್ಷ) ನರ್ಸು ಪುತ್ರನ್‌ರ ಮಗ, ಗುಂಡಿ ಹೆಜಮಾಡಿ, ಉಡುಪಿ ತಾಲ್ಲೂಕು, ದಕ್ಷಿಣ ಕನ್ನಡ,

೨. ಭಾಸ್ಕರ ಸುವರ್ಣ (ಸುಮಾರು ೨೩ ವರ್ಷ) ಲಕ್ಷ್ಮಣ ಸಲ್ಯಾನ್‌ರ ಮಗ, ಹೊಸಾಗ್ಗೆ ಫಲಿಮಾರು, ಹೆಜಮಾಡಿ, ಉಡುಪಿ ತಾಲ್ಲೂಕು, ದಕ್ಷಿಣ ಕನ್ನಡ.

ದುರಂತದಲ್ಲಿ ಮರಣ ಹೊಂದಿರುವವರ ಪೈಕಿ ಶ್ರೀ ಜನಾರ್ದನ ಸಾಲ್ಯಾನ್ ಮತ್ತು ಶ್ರೀ ನಾರಾಯಣ ಪುತ್ರನ್ ಇವರುಗಳು ಸ್ಥಳೀಯ ಮೀನುಗಾರಿಕೆ ಸಹಕಾರ ಸಂಘಗಳ ಸದಸ್ಯರಾಗಿರುವವರು. ಹೀಗಾಗಿ ಇವರ ಕುಟುಂಬಗಳಿಗೆ ಸಾಮೂಹಿಕ ವಿಮಾ ಯೋಜನೆಯನ್ವಯ ೧೫ ಸಾವಿರ ರೂಪಾಯಿಗಳ ಪರಿಹಾರವನ್ನು ಒದಗಿಸಲಾಗುವುದು.

ಈ ವಿಚಾರದಲ್ಲಿ ಸೂಕ್ತ ಕಾಗದ ಪತ್ರಗಳನ್ನು ಇಲಾಖೆಯ ಉಪ ನಿರ್ದೇಶಕರು ತಯಾರಿಸುತ್ತಲಿದ್ದಾರೆ. ಮರಣಪಟ್ಟ ಇನ್ನೊಬ್ಬ ಮೀನುಗಾರರಾದ ಶ್ರೀ ವಿಶ್ವನಾಥ ಕೋಟ್ಯಾನ್ ಇವರು ಮೀನುಗಾರರ ಸಹಕಾರ ಸಂಘದ ಸದಸ್ಯರಾಗಿದ್ದು ಇತ್ತೀಚೆಗೆ ಸದಸ್ಯತ್ವತನವನ್ನು ರದ್ದು ಮಾಡಿ ಕೊಂಡು ಪಾಲು ಬಂಡವಾಳ ಹಿಂದೆ ಪಡೆದಿರುವುದಾಗಿ ತಿಳಿದು ಬಂದಿದೆ. ಹೀಗಾಗಿ ಇವರ ಕುಟುಂಬದ ಸದಸ್ಯರಿಗೆ ಸಾಮೂಹಿಕ ವಿಮಾ ಯೋಜನೆಯನ್ವಯ ಪರಿಹಾರವನ್ನು ಒದಗಿಸುವುದು ಅಸಾಧ್ಯವಾಗಿದೆ. ಆದರೂ ಇವರ ಸಂತೃಪ್ತ ಕುಟುಂಬದ ಸದಸ್ಯರಿಗೆ ರಾಜ್ಯದ ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಅಥವಾ ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಸೂಕ್ತ ಪರಿಹಾರವನ್ನು ಒದಗಿಸಲಾಗುವುದು.

ಅಧ್ಯಕ್ಷರು.—ಶ್ರೀ ಜಿ.ಎಸ್. ಆಚಾರ್ (ಬೈಂದೂರು)
ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ)
ಶ್ರೀ ಬಸವರಾಜ್ (ಬ್ರಹ್ಮಾವರ)
ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ) } ಎಲ್ಲರ ಪರವಾಗಿ
ಶ್ರೀ ವಸಂತ ವಿ. ಸಾಲಿಯಾನ್ (ಕಾಪು) | ಆಚಾರ್‌ರವರು
ಶ್ರೀ ಬ್ಲೇಸಿಯಸ್ ಡಿಸೋಜ (ಮಂಗಳೂರು) | ಓದಿ
ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ)

VII ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ತೀರದಲ್ಲಿ ಯಾಂತ್ರೀಕೃತ ಮೀನುಗಾರಿಕೆ ಪ್ರಾರಂಭಿಸಿರುವುದರಿಂದ ಉಂಟಾದ ಪ್ರಕ್ಷುಬ್ಧ ಸ್ಥಿತಿ

ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಕರ್ನಾಟಕದ ಕರಾವಳಿಯ ಉತ್ತರ ಕನ್ನಡ ಕಡಲ ತೀರದಲ್ಲಿ ಈಗಾಗಲೇ ಯಾಂತ್ರೀಕೃತ ದೋಣಿಗಳು ಮತ್ತು ಪರ್ಸಿಯನ್ ಬೋಟುಗಳು ಸಮುದ್ರದಲ್ಲಿ ಮೀನು ಹಿಡಿಯಲು ಪ್ರಾರಂಭಿಸಿದ ಪ್ರಯುಕ್ತ, ದಕ್ಷಿಣ ಕನ್ನಡದ ಕಡಲ ತೀರದಲ್ಲಿ ಸಹ ಆಗಸ್ಟ್ ೧೫ರಿಂದ ಯಾಂತ್ರೀಕೃತ ಮೀನುಗಾರಿಕೆ ಪ್ರಾರಂಭಿಸಲಾಗುವುದೆಂದು ಸಂಬಂಧಪಟ್ಟವರು ಪ್ರಕಟಣೆ